PRESS RELEASE

WORLD RESOURCES INSTITUTE

TOYOTA Mobility Foundation
一般財団法人 トヨタ・モビリティ基金

**ಟೊಯೊಟ ಮೊಬಿಲಿಟಿ ಫೌಂಡೇಷನ್ ಹಾಗೂ ವರ್ಲ್ಡ್ ರಿಸೋರ್ಸಸ್ ಇನ್ಸ್‌ಟಿಟ್ಯೂಟ್ ವತಿಯಿಂದ ಬೆಂಗಳೂರು ಮೆಟ್ರೊಗೆ ಸುಧಾರಿತ ಸಂಪರ್ಕ ವ್ಯವಸ್ಥೆಗಳ ಪರಿಶೋಧನೆ**

ಬೆಂಗಳೂರು, ಭಾರತ (ಡಿಸೆಂಬರ್ 22, 2016) – ಬೆಂಗಳೂರು ನಗರದ ಮೆಟ್ರೊ ರೈಲು ವ್ಯವಸ್ಥೆಗೆ ಸುಲಭದ ಸಂಪರ್ಕ ಕಲ್ಪಿಸುವ ಸಂಭವನೀಯ ಪರಿಹಾರಗಳನ್ನು ಪರಿಶೋಧಿಸಲು ಟೊಯೊಟ ಮೊಬಿಲಿಟಿ ಫೌಂಡೇಷನ್ (ಟಿಎಂಎಫ್), ವರ್ಲ್ಡ್ ರಿಸೋರ್ಸಸ್ ಇನ್ಸ್‌ಟಿಟ್ಯೂಟ್‌ನೊಂದಿಗೆ (ಡಬ್ಲ್ಯೂಆರ್‌ಐ) ಒಪ್ಪಂದವನ್ನು ಮಾಡಿಕೊಂಡಿದೆ.

ಅಂದಾಜು 12 ದಶಲಕ್ಷ ಜನಸಂಖ್ಯೆಯನ್ನು ಹೊಂದಿರುವ ಬೆಂಗಳೂರು ನಗರ, ಭಾರತದ ಮಾಹಿತಿ ತಂತ್ರಜ್ಞಾನದ ರಾಜಧಾನಿ ಎಂಬ ಗುರುತಿನ ಭಾಗಶಃ ಕಾರಣದಿಂದಾಗಿ ಅತೀ ವೇಗವಾದ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಸಾಕ್ಷಿಯಾಗಿದೆ. ಈ ಅಭಿವೃದ್ಧಿ ಆರ್ಥಿಕ ಸ್ಥಿತಿಯನ್ನು ವೃದ್ಧಿಸಿದೆ. ಆದರೆ ಜೊತೆಗೆ ನಗರದೊಳಗಿನ ಸಾರಿಗೆ ವ್ಯವಸ್ಥೆ ಬಹಳ ಇಕ್ಕಟ್ಟಿನ ಸ್ಥಿತಿಗೆ ಸಿಲುಕಿದ್ದು, ಸೀಮಿತಿ ಲಭ್ಯತೆಗೆ ಕಾರಣವಾಗಿದೆ. ಈ ಸಮಸ್ಯೆಗಳನ್ನು ಹೋಗಲಾಡಿಸಲು ಸರ್ಕಾರ ನಗರದಲ್ಲಿ ಮೆಟ್ರೊ ರೈಲು ವ್ಯವಸ್ಥೆಯನ್ನು ಕಲ್ಪಿಸಿದೆ ಹಾಗೂ ಪ್ರಸ್ತುತ ಈ ವ್ಯವಸ್ಥೆಯನ್ನು ಬಳಸುವ ಪ್ರಯಾಣಿಕರ ಸಂಖ್ಯೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

ಟಿಎಂಎಫ್ ಹಾಗೂ ಡಬ್ಲ್ಯೂಆರ್‌ಐ ಬೆಂಗಳೂರಿನಲ್ಲಿ ಪ್ರಯಾಣಿಕರು ಮೆಟ್ರೊ ರೈಲುಗಳನ್ನು ಸುಲಭವಾಗಿ ತಲುಪಲು ಸುಧಾರಿತ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಲು ಕಾರ್ಯನಿರತವಾಗಿದ್ದು, ಈ ನಿಟ್ಟಿನಲ್ಲಿ ಸಂಶೋಧನೆ, ಸಾಮರ್ಥ್ಯಾಭಿವೃದ್ಧಿ, ಮುಕ್ತ ಸಂಯೋಜನೆ ಹಾಗೂ ಪರಿಶೀಲನೆಗಳನ್ನು ಕೈಗೊಂಡಿದೆ. ಇದರಿಂದ ನಗರ ನಿವಾಸಿಗಳಿಗೆ ನಗರದಾದ್ಯಂತ ಸಂಚರಿಸುವುದು ಸುಲಭವಾಗುತ್ತದೆ.

ಟಿಎಂಎಫ್ ಹಾಗೂ ಡಬ್ಲ್ಯೂಆರ್‌ಐ, ಬೆಂಗಳೂರಿನಲ್ಲಿ ರಾಜ್ಯ ಸರ್ಕಾರ, ಸಾರ್ವಜನಿಕ ಏಜೆನ್ಸಿಗಳು ಹಾಗೂ ಬೆಂಗಳೂರಿನ ಐಟಿ ವಲಯ ಒಳಗೊಂಡಂತೆ ವಿವಿಧ ಭಾಗೀದಾರರೊಂದಿಗೆ ಸಂಯೋಜನೆಯನ್ನು ಮಾಡಿಕೊಳ್ಳಲಿದೆ. ಈ ಎಲ್ಲಾ ಭಾಗೀದಾರರ ಸಂಯೋಜನೆಯೊಂದಿಗೆ, ಬೆಂಗಳೂರು ಮೊಬಿಲಿಟಿ ಯೋಜನೆ ಎಂದೂ ಕರೆಯಲ್ಪಡುವಂತಹ, ನಿಲ್ದಾಣ ದೊರೆಯುವಿಕೆ & ಸಾರಿಗೆ ಕಾರ್ಯಕ್ರಮ (Station Access & Mobility Program (STAMP) ಎಂಬ ಯೋಜನೆಯನ್ನು ಅಭಿವೃದ್ಧಿಪಡಿಸಲಿದೆ. ಈ ಯೋಜನೆ 2016ರ ಡಿಸೆಂಬರ್‌ನಿಂದ 2018ರ ಮಾರ್ಚ್‌ವರೆಗೆ ನಡೆಯಲಿದೆ.

ಯೋಜನೆಯ ಮೊದಲ ವರ್ಷದಲ್ಲಿ ಟಿಎಂಎಫ್ ಹಾಗೂ ಡಬ್ಲ್ಯೂಆರ್‌ಐ, ಭಾಗೀದಾರರ ಜಾಲವನ್ನು ನಿರ್ಮಿಸಿ, ಮೆಟ್ರೊಗೆ ರೈಲುಗಳನ್ನು ಸುಲಭವಾಗಿ ತಲುಪುವ ಸಂಪರ್ಕ ವ್ಯವಸ್ಥೆಗೆ ಸಂಬಂಧಿಸಿದಂತೆ ಪ್ರಾಯೋಗಿಕ ಹಾಗೂ ಸರಿಹೊಂದುವಂತಹ ಪರಿಹಾರಗಳನ್ನು ಗುರುತಿಸುವಂತೆ ಆಹ್ವಾನಿಸಲಿದೆ. ಹೊಸ ಶೋಧನೆ ಮುಕ್ತ ಸವಾಲಿನ ಮೂಲಕ ಈ ವಿಚಾರಗಳನ್ನು ಪ್ರಸ್ತಾಪಿಸಲಿದೆ. ಟಿಎಂಎಫ್ ಹಾಗೂ ಡಬ್ಲ್ಯೂಆರ್‌ಐ ಸೂಕ್ತ ಪರಿಹಾರಗಳನ್ನು ಬೆಂಬಲಿಸುವುದರ ಜೊತೆಗೆ, ಬೆಂಗಳೂರು ಒಳಗೊಂಡಂತೆ ಇತರೆ ನಗರಗಳಲ್ಲಿಯೂ ಆ ಪರಿಹಾರಗಳನ್ನು

ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಿದೆ. ಯೋಜನೆಯ ಫಲಿತಾಂಶಗಳನ್ನು ಮೌಲ್ಯಮಾಪನ ಮಾಡಿದ ನಂತರ ಟಿಎಂಎಫ್, ಭಾರತದಲ್ಲಿ ಇದಕ್ಕೆ ಸಂಬಂಧಿಸಿದ ಭವಿಷ್ಯದ ಚಟುವಟಿಕೆಗಳ ವ್ಯಾಪ್ತಿಯನ್ನು ನಿರ್ಧರಿಸುತ್ತದೆ.

ಟಿಎಂಎಫ್ ಕಾರ್ಯಾಲಯದ ಅಧ್ಯಕ್ಷ ಹಾಗೂ ಹಿರಿಯ ನಿರ್ವಾಹಕ ಅಧಿಕಾರಿ, ಟೊಯೊಟ ಮೋಟಾರ್ ಕಾರ್ಪೊರೇಷನ್‌ನ ನಿರ್ದೇಶಕರ ಮಂಡಳಿಯ ಸದಸ್ಯರೂ ಆದ ಶಿಗೆರು ಹಯಕವ ಅವರು ಈ ಸಂದರ್ಭದಲ್ಲಿ ಮಾತನಾಡಿ, "ಬೆಂಗಳೂರು ನಗರದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಸಾರಿಗೆ ವ್ಯವಸ್ಥೆಗಳನ್ನು ಒಟ್ಟುಗೂಡಿಸುವ ಅವಕಾಶಗಳನ್ನು ಗುರುತಿಸುವ ಮೂಲಕ, ಟಿಎಂಎಫ್ ನಗರದಲ್ಲಿನ ಸಾರಿಗೆ ವ್ಯವಸ್ಥೆಯನ್ನು ಹೆಚ್ಚು ಉತ್ತಮ ಪಡಿಸಲು ಪ್ರಯತ್ನಿಸಲಿದೆ. ನಾವು ಈ ಕೆಲಸವನ್ನು, ನಗರ ಪಾಲಿಕೆ, ಸರ್ಕಾರೇತರ ಸಂಸ್ಥೆಗಳು ಹಾಗೂ ಐಟಿ ಉದ್ಯಮಗಳು ಒಳಗೊಂಡಂತೆ ವಿವಿಧ ಭಾಗೀದಾರರೊಂದಿಗೆ ಪಾಲುದಾರಿಕೆಯನ್ನು ಹೊಂದುವ ಮೂಲಕ ಸಾಧಿಸಲಿದ್ದೇವೆ," ಎಂದು ವಿವರಿಸಿದರು.

ಈ ಯೋಜನೆಗೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ ಟೊಯೊಟ ಕಿರ್ಲೋಸ್ಕರ್ ಮೋಟಾರ್‌ನ ಉಪಾಧ್ಯಕ್ಷ & ನಿರ್ದೇಶಕ ಶ್ರೀ ಶೇಖರ್ ವಿಶ್ವನಾಥನ್ ಅವರು ಈ ಸಂದರ್ಭದಲ್ಲಿ ಮಾತನಾಡಿ, "ಭಾರತದಲ್ಲಿ ಟೊಯೊಟ ಮೊಬಿಲಿಟಿ ಫೌಂಡೇಷನ್ ಹಾಗೂ ಡಬ್ಲ್ಯೂಆರ್‌ಐ ಕೈಗೊಂಡಿರುವ ಈ ಉಪಕ್ರಮವನ್ನು ಸ್ವಾಗತಿಸುತ್ತೇವೆ. ಬೆಂಗಳೂರಿನಲ್ಲಿ ಸುಧಾರಿತ ಸಾರಿಗೆ ವ್ಯವಸ್ಥೆಯ ದೊರೆಯುವಿಕೆಗೆ ಸಂಬಂಧಿಸಿದ ಸಂಭವನೀಯ ಪರಿಹಾರಗಳನ್ನು ಗುರುತಿಸುವ ಈ ಸಂಯೋಜಿತ ಪ್ರಯತ್ನದಿಂದ, ನಗರದಲ್ಲಿ ಪ್ರಸ್ತುತ ಇಕ್ಕಟ್ಟಿನ ಸಂಚಾರ ಪರಿಸ್ಥಿತಿಯನ್ನು ಎದುರಿಸುತ್ತಿರುವ ನಾಗರಿಕರಿಗೆ ಆರಾಮ ದೊರಕಲಿದೆ. ಸುರಕ್ಷತೆಗೆ ಹೆಚ್ಚು ಪ್ರಾಮುಖ್ಯತೆ ನೀಡುವ ಸಂಸ್ಥೆಯಾಗಿ ಟೊಯೊಟ ಭಾರತದಲ್ಲಿ ಸುರಕ್ಷಿತ ಸಾರಿಗೆ ಅನುಭವವನ್ನು ಖಾತ್ರಿಪಡಿಸಲು ಬದ್ಧವಾಗಿದೆ. ಟಿಎಂಎಫ್ ಹಾಗೂ ಡಬ್ಲ್ಯೂಆರ್‌ಐನ ಈ ಚಟುವಟಿಕೆಗಳಿಗೆ ಪೂರಕವಾಗಿ ಟಿಕೆಎಂ, ಭಾರತದಾದ್ಯಂತ ಹಮ್ಮಿಕೊಂಡಿರುವಂತಹ ತನ್ನ ರಸ್ತೆ ಸುರಕ್ಷತಾ ಅಭಿಯಾನಗಳ ಅತ್ಯುತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲಿದೆ ಹಾಗೂ ಈ ಕಾರ್ಯಕ್ರಮ ಅಗತ್ಯ ಬೆಂಬಲವನ್ನು ಒದಗಿಸಲಿದೆ. ಅಂತಿಮವಾಗಿ, ಈ ಅಭಿಯಾನದೊಂದಿಗೆ ಕೈಜೋಡಿಸಿರುವಂತಹ ನಗರದ ಎಲ್ಲಾ ಭಾಗೀದಾರರನ್ನೂ ನಾವು ಪ್ರಶಂಸಿಸುತ್ತೇವೆ," ಎಂದರು.

ಡಬ್ಲ್ಯೂಆರ್‌ಐ ಇಂಡಿಯಾದ ಇಂಟಿಗ್ರೇಟೆಡ್ ಟ್ರಾನ್ಸ್‌ಪೋರ್ಟ್ ವಿಭಾಗದ ನಿರ್ದೇಶಕ ಶ್ರೀ ಅಮಿತ್ ಭಟ್ ಅವರು ಮಾತನಾಡಿ, "ಭಾರತದ ಅನೇಕ ನಗರಗಳಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ದೊರೆಯುವಿಕೆ ದೊಡ್ಡ ಸಮಸ್ಯೆಯಾಗಿದೆ. ಮೆಟ್ರೊ ನಿಲ್ದಾಣಗಳನ್ನು ತಲುಪಲು ಹಾಗೂ ಅಲ್ಲಿಂದ ಹೊರಡಲು ಸುರಕ್ಷಿತ, ಸಮರ್ಥ ಹಾಗೂ ತಡೆರಹಿತ ಸಂಚಾರ ವ್ಯವಸ್ಥೆಯಿದ್ದರೆ, ಅದನ್ನು ಜನರು ಬಳಸಿಕೊಳ್ಳುವುದರ ಜೊತೆಗೆ, ಅತೀ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿರುವಂತಹ ಮೆಟ್ರೊ ರೈಲುಗಳಲ್ಲಿ ಪ್ರಯಾಣಿಸುವವರ ಸಂಖ್ಯೆಯನ್ನೂ ಸಾಕಷ್ಟು ಹೆಚ್ಚಿಸುತ್ತದೆ. ಇಂತಹ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸುವುದು ನಮ್ಮ ಉದ್ದೇಶವಾಗಿದೆ," ಎಂದರು.

ಡಬ್ಲ್ಯೂಆರ್‌ಐ ಇಂಡಿಯಾದ ನಗರ ಸಾರಿಗೆ ತಜ್ಞ ಪವನ್ ಮುಲುಕುಟ್ಲ ಅವರು ಮಾತನಾಡಿ, "ಹೆಚ್ಚಿನ ಜನರಿಗೆ ಸಂಪರ್ಕ ಕಲ್ಪಿಸುವ ವ್ಯವಸ್ಥೆಯನ್ನು ಸ್ಥಾಪಿಸಿದಲ್ಲಿ, ಬೆಂಗಳೂರು ನಗರದ ರೂ.14,000 ಕೋಟಿಗಳ ಮೌಲ್ಯದ ಮೆಟ್ರೊ ವ್ಯವಸ್ಥೆ ಮತ್ತಷ್ಟು ಪರಿಣಾಮಕಾರಿಯಾಗಬಲ್ಲದು. ಕಲ್ಪಿಸಲಾಗುವ ಸಂಪರ್ಕ ಪರಿಹಾರ, ಸುರಕ್ಷಿತ ದೊರೆಯುವಿಕೆ, ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ಒದಗಿಸುವುದರ ಜೊತೆಗೆ ತಂತ್ರಜ್ಞಾನವನ್ನು ಬಳಸಿಕೊಂಡು ಪರಿಸರದ ಮೇಲೆ ಕನಿಷ್ಠ ಪರಿಣಾಮ ಬೀರುವಂತಿರಬೇಕು," ಎಂದು ಅಭಿಪ್ರಾಯಪಟ್ಟರು.

**ಟೊಯೊಟ ಮೊಬಿಲಿಟಿ ಫೌಂಡೇಷನ್ ಕುರಿತು**

ಉತ್ತಮ ಸಂಚಾರ ವ್ಯವಸ್ಥೆಯ ಅಭಿವೃದ್ಧಿಯನ್ನು ಬೆಂಬಲಿಸುವ ಸಲುವಾಗಿ ಟೊಯೊಟ ಮೊಬಿಲಿಟಿ ಫೌಂಡೇಷನ್ ಅನ್ನು 2014ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿಸಲಾಯಿತು. ಸಂಚಾರ ವ್ಯವಸ್ಥೆಯಲ್ಲಿರುವ ಅಸಮಾನತೆಗಳನ್ನು ನಿರ್ಮೂಲನೆ ಮಾಡುವುದರ ಜೊತೆಗೆ ಫೌಂಡೇಷನ್ ಬಲಿಷ್ಠ ಸಂಚಾರ ವ್ಯವಸ್ಥೆಗಳನ್ನು ಬೆಂಬಲಿಸುವ ಗುರಿಯನ್ನು ಹೊಂದಿದೆ. ವಿಶ್ವದಾದ್ಯಂತ ಈ ರೀತಿಯ ಸಂಚಾರ ಸಮಸ್ಯೆಗಳನ್ನು ಬಗೆಹರಿಸಲು ಫೌಂಡೇಷನ್, ತಂತ್ರಜ್ಞಾನ, ಸುರಕ್ಷತೆ ಹಾಗೂ ಪರಿಸರ ಕ್ಷೇತ್ರಗಳಲ್ಲಿರುವ ಟೊಯೊಟದ ತಜ್ಞತೆಯನ್ನು ಬಳಸಿಕೊಳ್ಳುವುದಲ್ಲದೆ, ವಿಶ್ವವಿದ್ಯಾನಿಲಯಗಳು, ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳೊಂದಿಗೆ ಕೆಲಸ ಮಾಡುತ್ತದೆ. ಫೌಂಡೇಷನ್‌ನ ಕಾರ್ಯಕ್ರಮಗಳ ಪೈಕಿ ನಗರ ಸಾರಿಗೆ ಸಮಸ್ಯೆಗಳನ್ನು ಬಗೆಹರಿಸುವುದು, ವೈಯಕ್ತಿಕ ಸಂಚಾರ ಬಳಕೆಯ ವಿಸ್ತರಣೆ ಹಾಗೂ ಮುಂದಿನ ತಲೆಮಾರಿಗೆ ಸುಲಭ ಸಂಚಾರ ವ್ಯವಸ್ಥೆಯನ್ನು ಕಲ್ಪಿಸಲು ಪರಿಹಾರಗಳ ಅಭಿವೃದ್ಧಿಯಂತಹ ಕಾರ್ಯಗಳು ಫೌಂಡೇಷನ್‌ನ ಕಾರ್ಯಕ್ರಮಗಳಲ್ಲಿ ಸೇರಿವೆ.

**ವರ್ಲ್ಡ್ ರಿಸೋರ್ಸಸ್ ಇನ್‌ಸ್ಟಿಟ್ಯೂಟ್ ಕುರಿತು**

ವರ್ಲ್ಡ್ ರಿಸೋರ್ಸಸ್ ಇನ್‌ಸ್ಟಿಟ್ಯೂಟ್ (ಡಬ್ಲ್ಯೂಆರ್‌ಐ), ಬ್ರಜಿಲ್, ಚೀನಾ, ಯೂರೋಪ್, ಭಾರತ, ಇಂಡೋನೇಷ್ಯ, ಮೆಕ್ಸಿಕೊ ಹಾಗೂ ಯುನೈಟೆಡ್ ಸ್ಟೇಟ್ಸ್‌ಗಳಲ್ಲಿ ಕಛೇರಿಗಳನ್ನು ಹೊಂದಿದ್ದು, 50ಕ್ಕೂ ಹೆಚ್ಚಿನ ಸಂಖ್ಯೆಯ ರಾಷ್ಟ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಜಾಗತಿಕ ಸಂಶೋಧನಾ ಸಂಸ್ಥೆಯಾಗಿದೆ. ನಮ್ಮ 450ಕ್ಕೂ ಹೆಚ್ಚಿನ ಸಂಖ್ಯೆಯ ತಜ್ಞರು ಹಾಗೂ ಸಿಬ್ಬಂದಿಗಳು, ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಲು, ದೊಡ್ಡ ವಿಚಾರಗಳನ್ನು ಕಾರ್ಯರೂಪಕ್ಕೆ ಪರಿವರ್ತಿಸಲು ನಾಯಕರೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಾರೆ.

ಭಾರತದಲ್ಲಿ ಪ್ರಸ್ತುತ ತುರ್ತು ಸವಾಲುಗಳಾಗಿರುವ ತೀವ್ರ ನಗರೀಕರಣ, ವಿದ್ಯುತ್ ಬೇಡಿಕೆ, ವಾತಾವರಣ ಬದಲಾವಣೆಯ ಪ್ರತಿಕ್ರಿಯೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಬೃಹತ್ ಅವನತಿ ಈ ನಾಲ್ಕು ಸಮಸ್ಯೆಗಳನ್ನು ಬಗೆಹರಿಸಲು, ಡಬ್ಲ್ಯೂಆರ್‌ಐ, ಸರ್ಕಾರ, ಉದ್ಯಮಗಳು, ನಾಗರಿಕ ಸಮಾಜ ಹಾಗೂ ಇತರೆ ಎನ್‌ಜಿಒಗಳೊಂದಿಗೆ ನಿಕಟವಾಗಿ ಕೆಲಸ ನಿರ್ವಹಿಸುತ್ತದೆ.

**ಸಂಪರ್ಕಿಸಿ:**

**ಟೊಯೊಟ ಮೊಬಿಲಿಟಿ ಫೌಂಡೇಷನ್**

info-Bengaluru@toyota-mf.org,
ದೂ: (81)-3-381709960

**ನಿತ್ಯಾ ಕೌಶಿಕ್**
ಡಬ್ಲ್ಯೂಆರ್‌ಐ ಇಂಡಿಯಾ
nitya.kaushik@wri.org
ಮೊ: +91 9819902763